| ವಿಧಾನ ಪರಿಷತ್ | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 839 |
| ಸದಸ್ಯರ ಹೆಸರು | ಶ್ರೀ ಪ್ರತಾಪ್ ಸಿಂಹ ನಾಯಕ್. ಕೆ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 16.12.2024 |
| ಉತ್ತರಿಸುವವರು | ಮಾನ್ಯ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅರಣ್ಯ (ಸಂರಕ್ಷಣೆ) ಕಾಯ್ದೆ-1980 ಜಾರಿಗೆ ಬರುವ ಪೂರ್ವದಲ್ಲಿ ರಾಜ್ಯ ಸರ್ಕಾರದ ಸಕ್ಷಮ ಪ್ರಾಧಿಕಾರಿಗಳು ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಭೂ ಮಂಜೂರಾತಿ ಕಾಯ್ದೆ ಮತ್ತು ನಿಯಮಗಳು ಹಾಗೂ ಇತರೆ ಕಾನೂನಾತ್ಮಕ ನಿಯಮಗಳಡಿಯಲ್ಲಿ ಅನೇಕ ಪ್ರಕರಣಗಳಲ್ಲಿ ಅರಣ್ಯ ಭೂಮಿಯನ್ನು ಮಂಜೂರು ಮಾಡಿವೆಯೇ; | ಅರಣ್ಯ (ಸಂರಕ್ಷಣೆ) ಕಾಯ್ದೆ 1980 ಜಾರಿಗೆ ಬರುವ ಪೂರ್ವದಲ್ಲಿ ರಾಜ್ಯ ಸರ್ಕಾರದ ಸಕ್ಷಮ ಪ್ರಾಧಿಕಾರಗಳು ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಭೂ ಮಂಜೂರಾತಿ ಕಾಯ್ದೆ ಮತ್ತು ನಿಯಮಗಳು ಹಾಗೂ ಇತರೆ ಕಾನೂನಾತ್ಮಕ ನಿಯಮಗಳಡಿಯಲ್ಲಿ ವಿವಿಧ ಯೋಜನೆಗಳಿಗೆ ಹಲವಾರು ಪ್ರಕರಣಗಳಲ್ಲಿ ಅರಣ್ಯ ಭೂಮಿಯನ್ನು ಮಂಜೂರು ಮಾಡಿರುತ್ತಾರೆ. |
| ಆ) | ಮಂಜೂರು ಮಾಡಿದ್ದಲ್ಲಿ ಆ ವೇಳೆಯಲ್ಲಿ ಕರ್ನಾಟಕದಲ್ಲಿ ಚಾಲ್ತಿಯಲ್ಲಿದ್ದಂತಹ ಅರಣ್ಯ ಕಾಯ್ದೆಗಳನ್ವಯ ಇಂತಹ ಮಂಜೂರಾದ ಎಲ್ಲಾ ಅರಣ್ಯ ಭೂಮಿಯನ್ನು "Denotification" ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಇ) | ಬಂದಿದ್ದಲ್ಲಿ ಇಂದಿಗೂ ಇಂತಹ ಮಂಜೂರಾತಿಗಳು ಕರ್ನಾಟಕ ಅರಣ್ಯ ಇಲಾಖೆಯ ದಾಖಲೆಗಳಲ್ಲಿ "ಅರಣ್ಯ" ಎಂಬುದಾಗಿ ಮುಂದುವರೆಸಿಕೊಂಡು ಬರಲಾಗುತ್ತಿದ್ದು, ಈ ಸಮಸ್ಯೆ ಪರಿಹರಿಸಲು ಸರ್ಕಾರ ಇದುವರೆಗೂ ಏನು ಕ್ರಮ ಕೈಗೊಂಡಿದೆ; | ಸದರಿ ಡಿ-ರಿಸರ್ವ್‌ವೇಷನ್/ಡಿ-ನೋಟಿಫೀಕೇಶನ್ ಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಅರಣ್ಯ, ಪರಿಸರ ಹವಾಮಾನ ಬದಲಾವಣೆ ಮಂತ್ರಾಲಯದ ವನ್ (ಸಂರಕ್ಷಣ್ ಏವಂ ಸಂವರ್ಧನ್) ಅಧಿನಿಯಮ್-1980 ಮತ್ತು ವನ್ (ಸಂರಕ್ಷಣ್ ಏವಂ ಸಂವರ್ಧನ್) ನಿಯಮ್-2023 ರಡಿಯಲ್ಲಿ ಹೊರಡಿಸಿರುವ ಏಕೀಕೃತ ಮಾರ್ಗಸೂಚಿ ಮತ್ತು ಸ್ಪಷ್ಟೀಕರಣದ ಅಧ್ಯಾಯ – 1, ಪ್ಯಾರಾ-1.2. (vii) ರಲ್ಲಿ ಸೂಚಿಸಿರುವಂತೆ, ದಿನಾಂಕ: 25.10.1980ರ ಪೂರ್ವದಲ್ಲಿ ಆಡಳಿತಾತ್ಮಕ ಅನುಮೋದನೆ ಪಡೆದಿರುವ ಯೋಜನೆಗಳಿಗೆ ರಾಜ್ಯ ಸರ್ಕಾರ ಯಾವುದೇ ಯೋಜನೆಗೆ ಅರಣ್ಯ ಪ್ರದೇಶವನ್ನು ಡಿ-ರಿಸರ್ವ್ / ಡಿ-ನೋಟಿಫೈ ಮಾಡಲು ನಿರ್ದಿಷ್ಟ ಆದೇಶದನ್ವಯ ಹೊರಡಿಸದಿದ್ದಲ್ಲಿ, ಅಂತಹ ಪ್ರಕರಣಗಳಿಗೆ ವನ್ ( ಸಂರಕ್ಷಣ್ ಏವಂ ಸಂವರ್ಧನ್) ಅಧಿನಿಯಮ್-1980 ರನ್ವಯ ಕೇಂದ್ರ ಸರ್ಕಾರದ ಪೂರ್ವಾನುಮತಿಯ ಅಗತ್ಯವಿರುತ್ತದೆ ಎಂದು ನಮೂದಾಗಿರುತ್ತದೆ.<br><br>ಮುಂದುವರೆದು, ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ: 13.11.2000ರ IA No. 2 in WP No. 337/1995, and again re-iterated by the Supreme Court on 09.02.2004 in IA No. 16 that "...Pending further orders, no de-reservation of Forest/Sanctuaries/ National Parks shall be effected" ಎಂದು ಆದೇಶಿಸಿರುತ್ತದೆ. |

| | | |
|---|---|---|
| | | ಸದರಿ ಆದೇಶದ ಹಿನ್ನೆಲೆಯಲ್ಲಿ ಅರಣ್ಯ ಭೂಮಿಯನ್ನು ಡಿ-ರಿಸರ್ವ /ಡಿ-ನೋಟಿಫೈ ಮಾಡಲು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅನುಮತಿ ಪಡೆಯಬೇಕಿರುತ್ತದೆ.<br>ಈ ಹಿನ್ನಲೆಯಲ್ಲಿ ಅರಣ್ಯ ಭೂಮಿಯನ್ನು ಡಿ-ರಿಸರ್ವ/ಡಿ-ನೋಟಿಫೈ ಮಾಡಲು ಹಲವು ಪ್ರಕರಣಗಳನ್ನು ಮೇಲೆ ತಿಳಿಸಿರುವಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅನುಮತಿಗಾಗಿ I.A ಸಲ್ಲಿಸಲಾಗಿದೆ. |
| ಈ) | ಸದರಿ ಈ ಎಲ್ಲಾ ಅರ್ಹ ಅರಣ್ಯ ಭೂ ಮಂಜೂರಾತಿ ಪ್ರಕರಣಗಳಲ್ಲಿ ಸರ್ಕಾರದ ನಿಲುವೇನು? | ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಈಗಾಗಲೇ I.A ಸಲ್ಲಿಸಲಾದ ಪ್ರಕರಣಗಳಿಗೆ ಬರುವ ಆದೇಶದನುಸಾರ ಉಳಿದ ಪ್ರಕರಣಗಳಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು. |

**ಸಂಖ್ಯೆ: FEE/169/FGL/2024**

**(ಈಶ್ವರ ಬಿ. ಖಂಡ್ರೆ)**
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು